## ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಜೆ ಎಂ ಎಫ್ ಸಿ ನ್ಯಾಯಾಲಯ, ದೊಡ್ಡಬಳ್ಳಾಪುರ

**ಸಿ ಸಿ ನಂ : 523/2015**

**ಪಿ ಡಬ್ಲ್ಯೂ - 6**

**ಸಿ ಡಬ್ಲ್ಯೂ- 7**

**ದಿಃ 15.04.2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಹೆಸರು ಃ ಡಾಃ ಮಂಜುನಾಥ ಎಸ್ ಈ**
**ತಂದೆಯ ಹೆಸರು ಃ ಈಶ್ವರಪ್ಪ.ಎಸ್.ಎ**
**ವಯಸ್ಸು ಃ 53 ವರ್ಷ**
**ಉದ್ಯೋಗ ಃ ಸರ್ಕಾರಿ ವೈದ್ಯರು**
**ವಿಳಾಸ ಃ ಬೆಂಗಳೂರು**

**ಮುಖ್ಯ ವಿಚಾರಣೆ ಃ ಸ ಸ ಅ ರವರಿಂದ**

ನಾನು 2013 ರಿಂದ ದೊಡ್ಡಬಳ್ಳಾಪುರದ ಸರ್ಕಾರಿ ಆಸ್ಪತ್ರೆಯಲ್ಲಿ ಹಿರಿಯ ತಜ್ಞನ್ನಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿಃ 11.02.2015 ರಂದು ಬೆಳಿಗ್ಗೆ 11-30 ಗಂಟೆ ಸಮಯಕ್ಕೆ ಚಾಸಾ-1 ರವರು ಹಲ್ಲೆಯ ಹಿನ್ನಲೆಯಲ್ಲಿ ಚಿಕಿತ್ಸೆಗಾಗಿ ಆಸ್ಪತ್ರೆಗೆ ಬಂದಿದ್ದರು. ಅವರನ್ನು ಪರಿಕ್ಷೀಸಿದಾಗ ಅವರಿಗೆ Splint ಇರುವುದು ಕಂಡುಬಂದಿತು. ನಾನು ಅದನ್ನು ತೆಗೆದು ಕ್ಷ-ಕಿರಣ ಮಾಡಲು ಸೂಚಿಸಿದೆನು. ಕ್ಷ-ಕಿರಣ ವರದಿಯಲ್ಲಿ ಅವರ ಎಡ ಮುಂಗೈ ಮುರಿದಿರುವುದು ಕಂಡುಬಂದಿತು. ಸದರಿ ಗಾಯವು ತೀವ್ರ ಸ್ವರೂಪದ ಗಾಯವಾಗಿತ್ತು. ಅವರನ್ನು ಪರೀಕ್ಷಿಸಿ ಸೂಕ್ತ ಚಿಕಿತ್ಸೆ ನೀಡಿರುತ್ತೇನೆ. ಸಾಕ್ಷಿಯು ಗಾಯದ ಪ್ರಮಾಣ ಪತ್ರದಲ್ಲಿನ ತಮ್ಮ ಸಹಿಯನ್ನು ನೋಡಿ ಗುರುತಿಸಿದ್ದು ಗಾಯದ ಪ್ರಮಾಣ ಪತ್ರವನ್ನು ನಿಪಿ-4 ಮತ್ತು ಸಾಕ್ಷಿಯ ಸಹಿಯನ್ನು ನಿಪಿ-4(ಎ) ಎಂದು ಗುರುತಿಸಲಾಯಿತು. ಸದರಿ ಗಾಯವು ದೊಣ್ಣೆಯಿಂದ ಹೊಡೆದಾಗ ಆಗುವ ಸಾಧ್ಯತೆ ಇರುತ್ತದೆ.

**CC 523/2015**
**PW.6**

**ಪಾಟೀ ಸವಾಲುಃ ಆರೋಪಿತರ ಪರ ಶ್ರೀ ಹೆಚ್.ಎಂ.ಎಸ್., ವಕೀಲರಿಂದ**

ಚಾಸಾ-1 ರವರು ಕ್ಷ-ಕಿರಣ ವರದಿಯನ್ನು ತಂದಿದ್ದರು. ಅವರು ಒಳರೋಗಿಯಾಗಿ ದಾಖಲಾಗಿ ಚಿಕಿತ್ಸೆಯನ್ನು ಪಡೆದಿಲ್ಲ. ಸಾಮಾನ್ಯವಾಗಿ ತೀವ್ರ ಸ್ವರೂಪದ ಗಾಯವಾಗಿದ್ದಾಗ ರೋಗಿಯು ಒಳರೋಗಿಯಾಗಿ ದಾಖಲಾಗುತ್ತಾರೆ ಎಂದರೆ ಸಾಕ್ಷಿಯು ಎಲ್ಲಾ ಸಮಯದಲ್ಲಿಯೂ ಅವಶ್ಯಕತೆ ಇಲ್ಲ ಎಂದು ನುಡಿಯುತ್ತಾರೆ. ಸಾಮಾನ್ಯವಾಗಿ ಕೆಳಗೆ ಬಿದ್ದಾಗಲೂ ಈ ರೀತಿ ಊತಗಾಯವಾಗುವ ಸಾಧ್ಯತೆ ಇರುತ್ತದೆ ಎಂದರೆ ಸರಿಯಲ್ಲ. ಘಟೆಯು ದಿಃ 01.02.2015 ರಂದು ಆಗಿದ್ದರೂ ಚಿಕಿತ್ಸೆಗೆ ದಿಃ 11.02.2015 ರಂದು ಸುಮಾರು 10 ದಿನಗಳ ತಡವಾಗಿ ಚಾಸಾ-1 ರವರು ಬಂದಿರುತ್ತಾರೆ ಎಂದರೆ ಸರಿ. ತಡವಾಗಿ ಚಿಕಿತ್ಸೆ ಪಡೆಯಲು ಕಾರಣವೇನೆಂದು ನಾನು ವಿಚಾರಿಸಿಲ್ಲ. ಯಾವುದೇ ಘಟನೆ ನಡೆಯದೇ ಇದ್ದರೂ ಚಾಸಾ-1 ರವರಿಗೆ ಸಹಾಯ ಮಾಡಲು ಸುಳ್ಳು ಗಾಯದ ಪ್ರಮಾಣ ಪತ್ರವನ್ನು ಕೊಟ್ಟಿರುತ್ತೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ.**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನ ರೀತ್ಯಾ ಬೆರಳಚ್ಚುಗಾರರಿಂದ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಿಸಲಾಯಿತು)**

**ಓ ಹೇ ಕೇ ಸ ಅದೆ**

**ಅಪರ ಸಿವಿಲ್ ನ್ಯಾ. ಮತ್ತು**
**ಜೆ.ಎಂ.ಎಫ್.ಸಿ, ದೊಡ್ಡಬಳ್ಳಾಪುರ**